ಬೆಂಗಳೂರು ನಗರಕ್ಕೆ ಬರುತ್ತಿರುವ ಈರೋಡ್ ಹಾಲನ್ನು ತಡೆಗಟ್ಟುವುದರ ಕುರಿತು

3176 - ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಲಬೆರಕೆ ಮಿಶ್ರಿತ ಈರೋಡ್ ಹಾಲನ್ನು ಬೆಂಗಳೂರು ನಗರದಲ್ಲಿ ಮಾರದಂತೆ ತಡೆಗಟ್ಟುವುದಾಗಿ ಮಾನ್ಯ ಮಂತ್ರಿಗಳು ಭರವಸೆ ನೀಡಿದ್ದಾಗಿಯೂ ಅವ್ಯಾಹತವಾಗಿ ಬೆಂಗಳೂರಿನಲ್ಲಿ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಬಂದಿದ್ದಲ್ಲಿ, ಈರೋಡ್ ಹಾಲನ್ನು ಬೆಂಗಳೂರು ನಗರದಲ್ಲಿ ಮಾರದಂತೆ ಸರ್ಕಾರ ಕೈಗೊಂಡ ಕ್ರಮ ಯಾವುದು?*

ಇ) *ತಡೆಗಟ್ಟಲು ವಿಫಲರಾದ ಎಷ್ಟು ಅಧಿಕಾರಿಗಳ ಮೇಲೆ ಇಲಾಖೆಯು ಕ್ರಮ ಕೈಗೊಂಡಿದೆ?*

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ನಿಜ, ಹಾಲು ಮಾರಾಟವು ಮುಂದುವರಿದಿದೆ. ಆದರೆ ಮಾದರಿ ಪರೀಕ್ಷೆಯನ್ನು ನಿಯತವಾಗಿ ನಡೆಸಲಾಗುತ್ತಿದೆ.

ಆ) ಮಾನ್ಯ ಮಂತ್ರಿಗಳು ಈರೋಡ್‌ನಿಂದ ಬರುತ್ತಿರುವ ಕಲಬೆರಕೆ ಹಾಲನ್ನು ಬೆಂಗಳೂರು ನಗರದಲ್ಲಿ ಮಾರಾಟ ಮಾಡದಂತೆ ತಡೆಗಟ್ಟುವುದರ ಬಗ್ಗೆ ಪ್ರಧಾನ ಕಾರ್ಯದರ್ಶಿಗಳು ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬೆಂಗಳೂರು ಮಹಾನಗರಪಾಲಿಕೆ, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಮತ್ತು ಕರ್ನಾಟಕ ಹಾಲು ಮಹಾ ಮಂಡಳಿ ಹಾಗೂ ಬೆಂಗಳೂರು ಡೇರಿಯ ಹಿರಿಯ ಅಧಿಕಾರಿಗಳೊಡನೆ ದಿನಾಂಕ 10-5-2000 ರಂದು ಸಭೆ ನಡೆಸಿ ಸುದೀರ್ಘವಾಗಿ ಚರ್ಚಿಸಿ ಆಹಾರ ಕಲಬೆರಕೆ ನಿರೋಧಕ ಕಾಯ್ದೆ ಅನ್ವಯ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ನಿರ್ದೇಶಿಸಿರುತ್ತಾರೆ. ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯಾಧಿಕಾರಿಗಳು ಈರೋಡ್‌ನಿಂದ ಬರುವ ಹಾಲನ್ನು ಮಾದರಿ ಪರೀಕ್ಷೆ ನಡೆಸಿದ್ದು ಕಲಬೆರಕೆ ಕಂಡು ಬಂದ ಹಾಲಿನ ಮಾದರಿಯನ್ನು ಆಹಾರ ಕಲಬೆರಕೆ ನಿರೋಧಕ ಕಾಯ್ದಿಯಡಿಯಲ್ಲಿ (prevention of food adulteration Act) ದಾವೆ ಹಾಕಿರುತ್ತಾರೆ.

ಇ) ಉದ್ಭವಿಸುವುದಿಲ್ಲ.

ತುಮಕೂರು ಜಿಲ್ಲೆ ದೇವರಾಯನದುರ್ಗದ ಅರಣ್ಯ ಸಂರಕ್ಷಣೆ

3177 - ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ಜಿಲ್ಲೆ ದೇವರಾಯನದುರ್ಗ ಅರಣ್ಯ ಭೂಮಿಯಲ್ಲಿ ಸ್ನಾತಕೋತ್ತರ ಕೇಂದ್ರ ಸ್ಥಾಪನೆಗೆ ಮಂಜೂರಾತಿ ನೀಡಲಾಗಿದೆಯೇ?*